ಪರೋಪಕಾರ ಗುಣಗಳ ಕುರಿತಾಗಿ ಪ್ರಶಂಸಾತ್ಮಕ ಸಾಕ್ಷ್ಯವನ್ನು ಪಡೆಯಲು ಬಹಳ ಪ್ರಯತ್ನಪಟ್ಟರು. ಆದರೆ ಒಬ್ಬರಾದರೂ ಮುಂದೆ ಬರಬೇಕೇ?

ಅಂಗಡಿ ರಾಮಯ್ಯ "ಆತನಿಗೆ ಏನೂ ಬುದ್ಧಿ ಇಲ್ಲ. ಪೂರ್ವಾಪರ ಯೋಚನೆ ಮಾಡದೆ ಸಿಡುಕುವ ಹುಚ್ಚಪ್ಪ" ಎಂದು "ಶ್ಲಾಘಿಸಿದರು."

ನೆರೆಮನೆ ನಾಗಮ್ಮನ ಗಂಡ "ಆತ ಮಹಾ ಜಗಳಗಂಟ. ಬರೇ ಜಿಪುಣ ಮನುಷ್ಯ. ಒಂದು ಸಣ್ಣ ನಿಂಬೆ ಹಣ್ಣಿಗಾಗಿ ನನ್ನ ಹೆಂಡತಿಯನ್ನು – ಮರ್ಯಾದಸ್ಥೆ ಮುತ್ತೈದೆ ಗೃಹಿಣಿಯನ್ನು – ಹೀನಾಮಾನವಾಗಿ ಬೈದ. ಅವಳ ಮೈಗೆ ಕೈಹಾಕಿ ಹೊಡೆಯದಿದ್ದುದೇ ದೊಡ್ಡ ಪುಣ್ಯ. ಕಡು ಲೋಭಿ ಸಹಾ. ಒಂದು ಸಣ್ಣ ನಿಂಬೆ ಹಣ್ಣಿನ ಬದಲಾಗಿ ನಾಲ್ಕು ಕಿತ್ತಳೆ ಹಣ್ಣು ಸೆಳೆದುಕೊಂಡ. ಆತನಿಗೆ ಮೂಗಿನಲ್ಲೇ ಮುನಿಸು. ದೂರ್ವಾಸಮುನಿ" ಎಂದು ನಂಜು ಕಾರಿದ.

ದೂರದ ಗುಡ್ಡೆ ಕಿಂಚಣ್ಣ "ನಿಜಕ್ಕೂ ಅವರು ಅಷ್ಟೇನೂ ಕೆಟ್ಟವರು ಅಲ್ಲ. ಆದರೆ ಆ ಅಂಗಡಿ ರಾಮಯ್ಯನ ಸಹವಾಸದಿಂದ ಕೆಟ್ಟುಬಿಟ್ಟರು. ಇತರರ ಜಗಳದಲ್ಲಿ ವೃಥಾ ಕೈಹಾಕುವ ಹವ್ಯಾಸ ಮಾಡಿಕೊಂಡರು. ಇವರ ಅಧಿಕ ಪ್ರಸಂಗದಿಂದ ನನಗೇ ಉಪದ್ರವ ಧನಹಾನಿ ಆಗಿದೆ" ಎಂದು ಟಿಪ್ಪಣಿ ಸೇರಿಸಿದ.

ಗಾಡಿ ಐತಪ್ಪ ಮಾತ್ರ ಎದೆ ತಟ್ಟಿ ಮುಂದೆ ಬಂದ – "ರುದ್ರಪ್ಪನವರ ಮೇಲೆ ಹೇರಿದ ಅಪವಾದ ಶುದ್ಧ ಸುಳ್ಳೇ ಸುಳ್ಳು. ಆ ಹೊತ್ತಿಗೆ ಅವರು ನನ್ನ ಎತ್ತಿನ ಹಟ್ಟಿಯ ಪಕ್ಕದಲ್ಲೇ ನನ್ನೊಡನೆಯೇ ಮಾತನಾಡುತ್ತಾ ಇದ್ದರು. ಕುಂದಾಪುರದ ಜಾತ್ರೆಯ ವಿಷಯ. ಮತ್ತೆ ಅವರು ಶುದ್ಧ ಶಾಂತಾರಾಮ ಧರ್ಮರಾಯ. ಬಾಯಿ ಒಳಗೆ ಬೆರಳು ತುರುಕಿದರೂ ಕಚ್ಚಲು ತಿಳಿಯದ ಮೊದ್ದು ಮನುಷ್ಯ. ಒಂದು ಇರುವೆಯನ್ನೂ ನೋಯಿಸುವವರಲ್ಲ ಏಕೆ? ಒಂದು ಬಾರಿ ನಾನು ನನ್ನ ಎತ್ತಿಗೆ ಒಂದು ಸಣ್ಣ ಪೆಟ್ಟು ಕೊಟ್ಟೆ. ಈ ಮಹಾರಾಯರು ಕಣ್ಣೀರು ತುಂಬಿಕೊಂಡು ನನಗೆ ಕೈಜೋಡಿಸಿ – ಐತಪ್ಪಣ್ಣವರೇ ನಿಮ್ಮ ದಮ್ಮಯ್ಯ, ನನ್ನಾಣೆಯಿದೆ. ಈ ಪಾಪದ ಜಂತುವಿಗೆ ಹೊಡೆದರೆ ನನಗೆ ಹೊಡೆದಂತೆಯೇ ಸಮ, ಎಂದು ಹಂಬಲಿಸಿ ಬೇಡಿಕೊಂಡರು. ಹೂವಿನಂಥಾ ಮನಸ್ಸು ರುದ್ರಪ್ಪನವರದು" ಎಂದು ಘಂಟಾಘೋಷವಾಗಿ ಸಾರಿದ. ಆದರೆ ಹೆಂಡ ಕುಡುಕ ಗಾಡಿ ಐತಪ್ಪನ ಮಾತನ್ನು ಯಾರು ಕೇಳಿಯಾರು?

ರುದ್ರಪ್ಪನ ಪರಿಸ್ಥಿತಿ ಭೀಕರವಾಗಿತ್ತು. ಕೋರ್ಟಿನಲ್ಲಿ ಏನು ತೀರ್ಮಾನವಾದೀತು ಎಂಬುದರಲ್ಲಿ ಯಾರಿಗೂ ಏನೂ ಸಂಶಯ ಇರಲಿಲ್ಲ.

ಹೆಂಡತಿ ಹೂವಮ್ಮ "ನನ್ನ ಹಾಳು ಭಾಗ್ಯ, ಅವರ ಹೆಸರೇ ರುದ್ರಪ್ಪ. ಹೆಸರಿಗೆ ತಕ್ಕಂತೆ ನಡತೆ. ನನ್ನ ತಂದೆ ತಾಯಿ ಇಂಥಾ ಸಿಡುಕರಿಗೆ ನನ್ನ ಕೈ ಹಿಡಿಸಿ ನನ್ನ ಜೀವಕ್ಕೆ ಬೆಂಕಿಕೊಟ್ಟರು" ಎಂದು ಬಿಕ್ಕಿ ಬಿಕ್ಕಿ ಅತ್ತು ಶಪಿಸಿದಳು.

★★★

ಕೋರ್ಟಿನಲ್ಲಿ ಮುಖ್ಯ ಸಾಕ್ಷಿಗಳೆಂದರೆ ಮೃತನ ವೃದ್ಧ ತಂದೆತಾಯಿ – ಗುಡಿಸಲು ಸಂಜೀವ ಮತ್ತು ಅವನ ಹೆಂಡತಿ.

ವಕೀಲರು ಮತ್ತು ಜಡ್ಜರು ಅವರನ್ನು ಕ್ರಮದಂತೆ ಪ್ರಶ್ನಿಸಿದರು.

ಅವರಿಬ್ಬರಿಂದಲೂ ಸ್ಪಷ್ಟ ನಿಸ್ಸಂಕೋಚವಾಗಿ ಒಂದೇ ಉತ್ತರ ಬಂತು.–

"ರುದ್ರಪ್ಪನವರು ಶಾಂತ ಸ್ವಭಾವದವರು. ಧರ್ಮಾತ್ಮರು. ನಾನು ಅವರನ್ನು ಬಾಲ್ಯದಿಂದ ಇಂದಿನ ತನಕ ನೋಡಿದ್ದೇನೆ. ಅವರಿಂದ ದುಷ್ಕೃತ್ಯ ಎಂದೂ ಆಗಿರಲಾರದು. ಅದು ಸಂಪೂರ್ಣ